ದಿನಾಂಕ 24-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ಪತ್ನಿಯಾಗಬೇಕು. ಆಕೆಗೆ ತಲೆಸುತ್ತು ಬರುವ ಖಾಯಿಲೆ ಇರುತ್ತದೆ. ಸದರಿ ಖಾಯಿಲೆ ಬಿಟ್ಟು ಬೇರೆ ಖಾಯಿಲೆ ಇರುವುದಿಲ್ಲ. ಈ ದಾವೆಯನ್ನು ಹೂಡಿದ ನಂತರ ಪ್ರತಿವಾದಿಯು ಈ ದಾವೆಯನ್ನು ನಡೆಸಿದ್ದು ವಕೀಲರಿಗೆ ಸಹ ಆಕೆ ಮಾಹಿತಿ ನೀಡಿರುತ್ತಾಳೆ ಎಂದರೆ ಸರಿ. ದಾವಾ ಆಸ್ತಿಯು ಮೂಲತಃ ಮರಿಯಪ್ಪ ತಂದೆ ಭರಮಪ್ಪ ಹರಿಜನ ರವರ ಆಸ್ತಿಯಾಗಿರುತ್ತದೆ ಎಂದರೆ ಸರಿ. ವಾದಿ ದುರ್ಗಪ್ಪ ಮರಿಯಪ್ಪನ ಮಗ ಎಂದರೆ ಸರಿ. ವಾದಿಯ ತಂದೆ 2 ನೇ ವಿವಾಹ ಆಗಿರುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಯ ತಂದೆಯು ಮೆಣಸಿನಹಾಳ ಮತ್ತು ಚಪ್ಪರದಹಳ್ಳಿ ಎರಡೂ ಕಡೆ ವಾಸವಿದ್ದನು ಎಂದರೆ ಸರಿಯಲ್ಲ. ವಾದಿಯ ತಂದೆಗೂ ಮತ್ತು ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

2. ನಿಂಗವ್ವ ನ ಅಡ್ಡ ಹೆಸರು ಹಿರೇಮೊರಬ ಎಂದರೆ ಸರಿ. ಮರಿಯಪ್ಪನು ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯನ್ನು ಹಕ್ಕುಬಿಟ್ಟುಕೊಟ್ಟಿರುವ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪತ್ರವನ್ನು ಯಾವ ದಿನಾಂಕದಂದು ಬರೆದುಕೊಟ್ಟಿರುತ್ತಾರೆ ಎಂದು ನೆನಪಿಲ್ಲ. ಆ ರೀತಿ ಯಾವುದೇ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ.

3. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಕುರಿತು ಹಕ್ಕುಬಿಟ್ಟುಕೊಟ್ಟ ಪತ್ರ ಬರೆದುಕೊಟ್ಟಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ರೂ.50,000/- ಗಳಿಗೆ ಖರೀದಿಗೆ ನೀಡಿರುವುದಾಗಿ ನುಡಿಯುತ್ತಾರೆ. ಆ ಕುರಿತು ನೊಂದಣಿ ಕಚೇರಿಯಲ್ಲಿ ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ. ಹಕ್ಕುಬಿಟ್ಟುಕೊಟ್ಟ ಪತ್ರವನ್ನು ಸಹ ನೊಂದಣಿ ಮಾಡಿಸಿರುವುದಿಲ್ಲ. ಆದರೆ ಸದರಿ ದಾಖಲೆಗಳನ್ನು ಗ್ರಾಮ ಪಂಚಾಯತಿಯಲ್ಲಿ ಬರೆಸಿರುವುದಾಗಿ ನುಡಿಯುತ್ತಾರೆ.

4. ದಾವಾ ಆಸ್ತಿಯ ಕೆಲವು ಭಾಗವನ್ನು ವಾದಿಯ ತಂದೆ ಮರಿಯಪ್ಪ ಭರಮಪ್ಪ ಹನುಮಂತಪ್ಪ ಮಾಸೂರು ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಯಾವಾಗಲೂ ಹಕ್ಕುಬಿಟ್ಟುಕೊಟ್ಟಿರುವುದಿಲ್ಲ ಅಥವಾ ಖರೀದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಮತ್ತು ಆತನ ಮರಣದ ನಂತರ ಆತನ ಮಕ್ಕಳು ಕಬ್ಜಾದಲ್ಲಿದ್ದು ಪಂಚಾಯತಿ ದಾಖಲೆಗಳು ಅವರ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿ ದಾವಾ ಆಸ್ತಿ ನೊಂದಣಿಯಾಗಿರುವುದಿಲ್ಲ ಎಂದು ಪಂಚಾಯತಿಯವರು ಧೃಢೀಕರಣ ಪತ್ರ ನೀಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ.

5. ಮರಿಯಪ್ಪನ ಜೀವಂತ ಕಾಲದಲ್ಲಿ ದಾವಾ ಆಸ್ತಿಯಲ್ಲಿ ಒಂದು ಹಂಚಿನ ಮನೆ ಇತ್ತು ಎಂದರೆ ಸರಿ. ಸದರಿ ಮನೆ ಈಗಲೂ ಸಹ ಹಾಗೆ ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪಂಚಾಯತಿಯಿಂದ ಅನುದಾನ ಪಡೆದು ಮನೆ ನಿರ್ಮಿಸಿಕೊಂಡಿರುವುದು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯೇ ಮಾಲೀಕನಾಗಿದ್ದು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಯಾವುದೇ ಮಾಲೀಕತ್ವ ಇಲ್ಲದಿದ್ದರೂ ಸಹ ನಾವು ಕಾನೂನುಬಾಹಿರವಾಗಿ ಕಬ್ಜಾದಲ್ಲಿದ್ದು ವಾದಿಯು ಕಬ್ಜಾ ಮರಳಿಸುವಂತೆ ಕೇಳಿದಾಗ ಅಲ್ಲಗಳೆದಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಮಾಲೀಕನಾದ ಕಾರಣ ದಾವಾ ಆಸ್ತಿಯನ್ನು ಆತನಿಗೆ ಬಿಟ್ಟುಕೊಡಬೇಕು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.                    ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.                    ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.